**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಕ್ರಿಮಿಸ್ ನಂಃ 46/2024**

**ಪಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ದಿಃ 04.02.2026 ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ ಎದುರುದಾರರ ಪರ ವಕೀಲರುಃ**

1. ನನ್ನ ಮದುವೆ ಎದುರುದಾರನೊಂದಿಗೆ ಅವರ ಊರಿನಲ್ಲಿ ಸಂಪ್ರಾದಾಯಕವಾಗಿ ಆಗಿರುತ್ತದೆ. ಲಗ್ನದ ಸಮಯದಲ್ಲಿ ಎದುರುದಾರನ ಮನೆಯವರು ಏನು ಕೊಟ್ಟಿರುವುದಿಲ್ಲ. ಲಗ್ನದ ಮುಂಚೆ ಏನೇನು ಕೊಡಬೇಕು ಅಂತ ಮಾತುಕತೆಯಾಗಿತ್ತು. ಅದು 10 ತೋಲೆ ಬಂಗಾರ, ಒಂದು ಲಕ್ಷ ರೂಪಾಯಿ, ಅರಿವೆಗೋಸ್ಕರ ರೂ 10 ಸಾವಿರ ಕೊಡುವ ಬಗ್ಗೆ ಮಾತುಕತೆಯಾಗಿತ್ತು. ಅದೇ ರೀತಿ ಗಂಡನ ಮನೆಯವರು ನನಗೆ ಏನೇನು ಕೊಡಬೇಕು ಅಂತ ಮಾತುಕತೆ ಆಗಿಲ್ಲ.

2. ಈ ಅರ್ಜಿಗೆ ಎದುರುದಾರ ಸಲ್ಲಿಸಿದ ತಕರಾರು ಓದಿಸಿ ನೋಡಿಲ್ಲ. ರೂ 1 ಲಕ್ಷ ಮದುವೆ ಖರ್ಚಿಗೆ ಹಾಗೂ ರೂ 10 ಸಾವಿರ ಬಟ್ಟೆ ಮತ್ತು ವಾಚಗಾಗಿ ಅಂತ ಮಾತು ಆಗಿತ್ತು. ರೂ 10 ಸಾವಿರ ಕೊಟ್ಟಿದ್ದು ಇರುತ್ತದೆ. ಸಾಮಾನ್ಯವಾಗಿ ವರೋಪಚರಕ್ಕೆ ಸಂಬಂದಪಟ್ಟ ಹಾಗೇ ಯಾದಿ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ. ಈ ರೀತಿ ಬಂಗಾರ ಮತ್ತು ಹಣ ಕೊಟ್ಟಿರುವ ಬಗ್ಗೆ ಯಾದಿ ಮಾಡಿರುವುದಿಲ್ಲ, ಆದರೆ ಹಿರಿಯರ ಸಮಕ್ಷಮ ಕೊಟ್ಟಿರುತ್ತೇವೆ.

3. ಸದರಿ ಬಂಗಾರವನ್ನು ಆಭರಣದ ರೂಪದಲ್ಲಿ ಕೊಟ್ಟಿದ್ದು, ಅದು ಪಾಟಲಿ, ನಕ್ಲೇಸ್, ಕಿವಿ ಓಲೆ ಮತ್ತು ತಾಳೆ ಚೈನು ಕೊಟ್ಟಿದ್ದರು. ಸದರಿ ಆಭರಣಗಳನ್ನು ನನ್ನ ತವರು ಮನೆಯವರು ನನ್ನ ಗಂಡನಿಗೆ ಅವರ ಉಪಯೋಗಕ್ಕೆ ಕೊಟ್ಟಿದ್ದರು. ನನ್ನ ತವರು ಮನೆಯವರು ನನಗೆ ಯಾವುದೇ ಬಂಗಾರ ಕೊಟ್ಟಿರುವುದಿಲ್ಲ.

4. ಲಗ್ನದ ಮಾತುಕತೆ ಆಗುವ ಸಮಯದಲ್ಲಿ ಬಂಗಾರ ಹಾಗೂ ಹಣ ಕೊಡುವಾಗ ಹಿರಿಯರು ಅಂತ ಸೋಮಶೇಖರಗೌಡ ಪೊಲೀಸಪಾಟೀಲ, ವೀರುಪಾಕ್ಷಗೌಡ ಪಾಟೀಲ, ಹನಮಂತಪ್ಪ ಇಂಗಳಗಿ, ಸೋಮನಗೌಡ ಪಾಟೀಲ ಮತ್ತು ನನ್ನ ತಂದೆ ಇದ್ದರು. ಹಿರಿಯರೆಲ್ಲಾ ಸಾಕೇನ ನನ್ನ ತವರೂರು ಹಿರೇಬೂದಿಹಾಳದವರು. ಇವೆಲ್ಲವುಗಳನ್ನು ನಮ್ಮ ಮನೆಯಲ್ಲಿ ಹೀರೆಬೂದಿಹಾಳದಲ್ಲಿ ಲಗ್ನಕ್ಕಿಂತ 15 ದಿನಗಳ ಮುಂಚೆ ಕೊಟ್ಟಿರುತ್ತೇವೆ. ಈ ರೀತಿ ಕೊಡುವಾಗ ಅವರ ತರ್ಫಿಯಿಂದ ಎದುರುದಾರನ ಅಣ್ಣ ಚೆನ್ನಪ್ಪ ಹಾಗೂ ಅವರ ಓಣಿಯ ಮೂರು ಜನರು ಮತ್ತು ಒಬ್ಬರು ಹಂಚಿನಾಳದಿಂದ ಬಂದಿದ್ದರು. ಮೇಲೆ ಹೇಳಿದ

ಬಂಗಾರ ಮತ್ತು ಹಣವನ್ನು ಎದುರುದಾರನ ಜೊತೆಗೆ ಬಂದ ಹಿರಿಯರ ಕೈಯಲ್ಲಿ ಕೊಟ್ಟಿರುತ್ತಾರೆ. ಮೇಲೆ ಹೇಳಿದ ಹಿರಿಯರ ಸಾಕ್ಷಿ ಮಾಡಿಸುತ್ತೇನೆ.

5. ಲಗ್ನದ ಸಮಯದಲ್ಲಿ ಬಂಗಾರ, ಹಣ ಹಾಗೂ ಬಟ್ಟೆಗಾಗಿ ಹಣ ಕೊಡುವ ಮಾತುಕತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನ ಮನೆಯವರೇ ನನಗೆ ಐದು ತೋಲೆ ಬಂಗಾರ ನೀಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆ ಸಾಮೂಹಿಕ ಲಗ್ನದಲ್ಲಿ ಎದುರುದಾರನ ಊರು ಬಾಡ ಗ್ರಾಮದಲ್ಲಿ ಆಗಿರುತ್ತದೆ. ಸಾಮೂಹಿಕ ಲಗ್ನಕ್ಕೆ ಆದ ಖರ್ಚವೆಚ್ಚವನ್ನು ಎದುರುದಾರರೆ ಭರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

6. ಲಗ್ನ ಆದ ಮೂರು ನಾಲ್ಕು ವರ್ಷದ ನಂತರ ನಾನು ಗಂಡನ ಮನೆಗೆ ಹೋಗಿರುತ್ತೇನೆ. ಲಗ್ನದ ಸಮಯದಲ್ಲಿ 23 ವರ್ಷ ವಯಸ್ಸು ಆಗಿತ್ತು. ನಾನು ಲಗ್ನ ಆದ ಒಂದು ತಿಂಗಳಕ್ಕೆ ಎದುರುದಾರನ ಮನೆಗೆ ಬಾಳುವೆ ಮಾಡಲು ಹೋಗಿರುತ್ತೇನೆ ಎಂದರೆ ಸಾಕ್ಷಿ ಒಂದೆರಡು ಸಾರೀ ಹೋಗಿ ಬಂದಿರುತ್ತೇನೆ, ಮತ್ತೆ ಅವರು ನನಗೆ ಇಲ್ಲಿಯೇ ಬಿಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮದುವೆ ನಂತರ ಒಂದು ತಿಂಗಳ ಮಾತ್ರ ಎದುರುದಾರನ ಮನೆಯಲ್ಲಿ ಇದ್ದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮೂರು ನಾಲ್ಕು ತಿಂಗಳು ಎಂದು ನುಡಿಯುತ್ತಾರೆ. ನಾನು ಎದುರುದಾರನ ಮನೆಗೆ ಹೋದ ತಕ್ಷಣವೇ ನ್ಯಾಯ ಶುರುವಾಗಿರುತ್ತದೆ. ನಾನು ಹೇಳುವ ರೀತಿಯಲ್ಲಿ ಎದುರುದಾರನ ಮನೆಯವರು ಯಾವುದೇ ರೀತಿಯ ನ್ಯಾಯ ಮಾಡಿರುವುದಿಲ್ಲ, ಅವರು ನನಗೆ ಸರಿಯಾಗಿ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

7. ಎದುರುದಾರ ಮತ್ತು ಅವರ ಮನೆಯವರು ಈ ರೀತಿ ಸರಿಯಾಗಿ ನೋಡಿಕೊಳುತ್ತಿಲ್ಲ ಎಂದು ನಮ್ಮ ತವರು ಮನೆಯವರಿಗೆ ತಿಳಿಸಿರುವುದಿಲ್ಲ. ಬಾಳುವೆ ಮಾಡಲು ಹೋದ ಒಂದು ತಿಂಗಳಕ್ಕೆ ನನ್ನ ತಂದೆ ಬಾಡ ಗ್ರಾಮಕ್ಕೆ ಬಂದ ಎಂದರೆ ಸರಿಯಲ್ಲ. ನಾನೇ ನನ್ನ ತಂದೆಗೆ ಪೋನ್ ಮಾಡಿ ಕರೆಸಿದ್ದೆ ಎಂದರೆ ಸರಿಯಲ್ಲ. ಈ ರೀತಿ ನನ್ನ ತಂದೆಗೆ ಕರೆಸಿ ನನ್ನ ಗಂಡನ ಮನಸ್ಸಿನ ವಿರುದ್ಧ ನನಷ್ಟಕ್ಕೆ ಒತ್ತಾಯಿಂದ ನನ್ನ ತಂದೆಯ ಜೊತೆಗೆ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಹೋಗಬೇಡಾ ಅಂತ ನನ್ನ ಗಂಡ ಮತ್ತು ಹಿರಿಯರು ಬುದ್ಧಿವಾದ ಹೇಳಿದರು ಸಹ ಕೇಳಿಲ್ಲ ಎಂದರೆ ಸರಿಯಲ್ಲ.

8. ನಾನು ತವರು ಮನೆಗೆ ಬಂದ ಒಂದು ತಿಂಗಳ ನಂತರ ನನ್ನ ಗಂಡ ಮತ್ತು ಅವರ ಮನೆಯವರು ನನಗೆ ಕರೆಯಲು ಬಂದಿದ್ದರು ಎಂದರೆ ಸರಿಯಲ್ಲ. ಆಗ ನಾನು ನನ್ನ ಗಂಡನಿಗೆ ಇರುವ ಮನೆ ಬಿಟ್ಟು ಬೇರೆ ಮನೆ ಮಾಡಿದರೆ ಬರುತ್ತೇನೆ ಅಂತ ಷರತ್ತು ಹಾಕಿದೆ ಎಂದರೆ ಸರಿಯಲ್ಲ. ಬೀಗತನ ಮಾಡಿಸಿದ ಹಿರಿಯರು ಕರೆಯಲು ಬಂದಾಗ ಹೋಗಿರುತ್ತೇನೆ. ಈ ರೀತಿ ತವರು ಮನೆಗೆ ಬಂದ ಮೂರು ನಾಲ್ಕು ತಿಂಗಳಕ್ಕೆ

ಹೋಗಿರುತ್ತೇನೆ. ಈ ರೀತಿ ಹೋದ ನಂತರ ಐದಾರು ವರ್ಷ ಗಂಡನ ಮನೆಯಲ್ಲಿ ಇದ್ದೆ. ಆಗ ಗಂಡ ಮತ್ತು ಅವರ ಮನೆ ಜನರು ನನ್ನೊಂದಿಗೆ ಸರಿಯಾಗಿ ಇದ್ದರು, ಸಾಕ್ಷಿ ಮುಂದುವರೆದು ನನ್ನ ಗಂಡ ಮತ್ತು ಅವರ ಅಣ್ಣ ಹೊಡೆ ಬಡೆಯುವುದು ಮಾಡಿದರು ಎಂದು ನುಡಿಯುತ್ತಾರೆ. ಆ ರೀತಿ ಅವರು ಮಕ್ಕಳು ಆಗಿಲ್ಲ, ಬೇರೆ ಮದುವೆ ಮಾಡುತ್ತೇವೆ ಅಂತ ಹೊಡೆಯುತ್ತಿದ್ದರು. ನನ್ನ ಗಂಡನ ಅಣ್ಣನ ಹೆಸರು ಚೆನ್ನಪ್ಪ. ಈ ರೀತಿ ಹೊಡೆದ ಬಗ್ಗೆ ಅವರ ವಿರುದ್ಧ ಯಾವುದೇ ಪಿರ್ಯಾದು ನೀಡಿರುವುದಿಲ್ಲ. ಈ ರೀತಿ ಎದುರುದಾರ ಮತ್ತು ಅವರ ಅಣ್ಣ ಹೊಡೆ ಬಡೆ ಮಾಡದ ಕಾರಣ ಅವರ ವಿರುದ್ಧ ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

9. ಎದುರುದಾರನ ಮನೆಯಲ್ಲಿ ಅವರ ತಾಯಿ, ಮದುವೆಯಾಗದ ಅಕ್ಕ ಹಾಗೂ ಅವರ ಅಣ್ಣ ವಾಸವಿರುತ್ತಾರೆ. ನನ್ನ ಅತ್ತೆಗೆ 75 ವರ್ಷ ಆಗಿರಬಹುದು. ನನ್ನ ಅತ್ತೆಗೆ ಕಣ್ಣು ಮಂಜು ಮತ್ತು ಎದ್ದು ಓಡಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರನ ಸಹೋದರಿ ಅಂಗವೀಕಲಳು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ನಾಲ್ಕು ಜನ ಸಹೋದರರು. ಅವರೆಲ್ಲರೂ ಬೇರೆ ಬೇರೆ ಕಡೆಗೆ ಮನೆ ಮಾಡಿಕೊಂಡು ವಾಸವಾಗಿದ್ದಾರೆ. ನನ್ನ ಗಂಡನ ಒಬ್ಬ ಸಹೋದರ ತೀರಿಕೊಂಡಿರತ್ತಾರೆ. ಎದುರುದಾರನ ಮನೆಯಲ್ಲಿ ಎದುರುದಾರ, ಅವರ ತಾಯಿ ಮತ್ತು ಸಹೋದರಿ ವಾಸವಾಗಿರುತ್ತಾರೆ ಎಂದರೆ ಸರಿ. ತಾಯಿ ಮತ್ತು ಸಹೋದರಿಯನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನ ಗಂಡನದ್ದು ಎಂದರೆ ಸರಿಯಲ್ಲ.

10. ನಾನು ಎದುರುದಾರನಿಗೆ ತಾಯಿ ಮತ್ತು ಸಹೋದರಿಗೆ ಹೊರ ಹಾಕು ಅಂತ ಒತ್ತಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ತವರು ಮನೆಗೆ ಬಂದ ಆರು ತಿಂಗಳ ನಂತರ ಎದುರುದಾರ ಕರೆದಾಗ ಹೋಗಿರುತ್ತೇನೆ ಎಂದರೆ ಸರಿ. ಈ ರೀತಿ ಹೋದಾಗ ನನಗೆ ದೈಹಿಕ ಅನಾರೋಗ್ಯ ಮತ್ತು ಮಾನಸಿಕ ಅನಾರೋಗ್ಯ ಉಂಟಾಗುತ್ತದೆ ಅಂತ ನನ್ನ ಗಂಡನಿಗೆ ತಿಳಿಸಿದ್ದೆ ಎಂದರೆ ಸರಿ. ಅದಕ್ಕೆ ನನ್ನ ಗಂಡ ನನಗೆ ಹಾವೇರಿ, ಹುಬ್ಬಳ್ಳಿ, ಬೆಂಗಳೂರು ಮತ್ತು ಶಿವಮೊಗ್ಗದಲ್ಲಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ತಂದೆ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತೋರಿಸಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ. ನನ್ನ ಗಂಡ ತೋರಿಸಿರುವ ಬಗ್ಗೆ ಕಾಗದ ಪತ್ರಗಳು ಇವೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**